ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

# ಸೆಷನ್ಸ್ ಕೇಸ್ ನಂಬ್ರ 34/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿವೇಕ್ ಪ್ರಭು | ಪ್ರಾ.ಸಾ: 4 |
| ಗಂಡನ ಹೆಸರು | : | ವಿಠಲ ಪ್ರಭು | ಚಾಸಾ: 7 |
| ಪ್ರಾಯ | : | 58 ವರ್ಷ | **ದಿನಾಂಕ: 29.12.2021** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಿವಿಲ್ ಕಂಟ್ರಾಕ್ಟರ್ | |
| ವಾಸಸ್ಥಳ | : | ಫಳ್ನೀರ್, ಮಂಗಳೂರು. | |

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರಿಂದ:

ದಿನಾಂಕ 03.10.2008 ರಂದು ನಾನು, ಕಾಮತ್ ಮತ್ತು ಶರತ್ ಎಂಬುವರು ಪಾಂಡೇಶ್ವರದಲ್ಲಿ ನಿಂತಿದ್ದಾಗ ಮಧ್ಯಾಹ್ನ 2.30 ಗಂಟೆಗೆ ಪೊಲೀಸರು ಅಲ್ಲಿಗೆ ಬಂದಿದ್ದರು. ಪೊಲೀಸರು ನಮ್ಮನ್ನು ಕರೆದು ಭಯೋತ್ಪಾದನೆ ಚಟುವಟಿಕೆ ನಡೆಯುತ್ತಿದೆ ಎಂದು ನಮಗೆ ತಿಳಿಸಿದ್ದರು. ನಂತರ ನಮ್ಮೆಲ್ಲರನ್ನು ಪೊಲೀಸರು ಸುಭಾಷ್ ನಗರ ರಸ್ತೆಗೆ ಕರೆದುಕೊಂಡು ಹೋಗಿದ್ದರು. ಪೊಲೀಸರು ನಮ್ಮನ್ನು ಕರೆದಾಗ ಅವರ ವಾಹನದಲ್ಲಿ 3 ಮತ್ತು 4 ನೇ ಆರೋಪಿತರು ಇದ್ದರು. ಮೊಹಮ್ಮದ್ ಅಲಿ ಎಂಬಾತನು ನಮಗೆ ಮತ್ತು ಪೊಲೀಸರಿಗೆ ನೌಶಾದ್ ಈತನ ಮನೆಯನ್ನು ತೋರಿಸಿದ್ದಾರೆ. ಪೊಲೀಸರು ಆ ಮನೆಯ ಒಳಗಡೆ ಹೋಗಿದ್ದರು. ಆ ಮನೆಯಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಅವರೆಂದರೆ ಒಬ್ಬ ನೌಶಾದ್ ಮತ್ತು ಇನ್ನೊಬ್ಬ ಅಬೂಬಕ್ಕರ್ ಬಾವ. ಪೊಲೀಸರು ಅವರೊಂದಿಗೆ ಮಾತುಕತೆ ಮಾಡಿದ್ದಾರೆ. ಪೊಲೀಸರು ಆ ಮನೆಯಲ್ಲಿ ಹುಡುಕಾಟ ಮಾಡಿದ್ದಾರೆ. ಆ ಮನೆಯಲ್ಲಿ ಪೊಲೀಸರು ಕೆಲವು ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

2. ಒಂದು ಪಿ.ಸಿ.ಒ., 2 ಪೆನ್ ಡ್ರೈವ್, ಬೆಂಗಳೂರು ನಗರದ ನಕ್ಷೆ, ಒಂದು ಬ್ಯಾಂಕ್ ಪಾಸ್ ಪುಸ್ತಕ, ಸರ್ಕ್ಯೂಟ್ ಬೋರ್ಡ್, ಕೆಲವೊಂದು ಬುಕ್ ಗಳು, ಕೆಲವೊಂದು ಸಿ.ಡಿ. ಗಳು, ಮನೆಯ ಹೊರಗಡೆ ಒಂದು ಬೈಕ್ ಇತ್ಯಾದಿಗಳು ಆ ಮನೆಯಲ್ಲಿ ಇದ್ದವು ಮತ್ತು ಅವುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

(ಪ್ರಾ.ಸಾ.3 ಇವರಿಂದ ಗುರುತಿಸಲ್ಪಟ್ಟಂತಹ ದಾಖಲೆಗಳನ್ನು ಮತ್ತು ಮುದ್ದೆಮಾಲುಗಳಿಗೆ ಸರಿಯಾದ

ನಂಬರುಗಳನ್ನು ಅಂಟಿಸಬೇಕಾಗಿರುವುದರಿಂದ ಮತ್ತು ಆ ರೀತಿ ಮಾಡಿದ ನಂತರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಳ್ಳುವುದು ಸೂಕ್ತ ಎಂದು ಕಂಡು ಬಂದಿದ್ದರಿಂದ ಸಾಕ್ಷಿಯ ಮುಂದಿನ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.